<u>ದಿನಾಂಕ **25.01.2025** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲು : ಅರ್ಜಿದಾರ ಪರ ಶ್ರೀ. ಎಸ್ ಎ ಕೆ ವಕೀಲರಿಂದ:</u>

ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿರುತ್ತೇನೆ. ನನ್ನ ತಂದೆಯವರು ಸ್ಕ್ರಾಪ್ ಮರ್ಚಂಟರ್ ಎಂದರೆ ಸರಿ. ನಾನು ಸ್ಕ್ರಾಪ್ ಮರ್ಚಂಟರ್ ಎಂದರೆ ಸರಿ.

ಪ್ರಶ್ನೆ: ದಾವಣಗೆರೆಯಲ್ಲಿ ಎಷ್ಟು ಸ್ಕ್ರಾಪ್ ಮರ್ಚಂಟರ್ ಅಂಗಡಿಗಳು ಇರುತ್ತವೆ?

ಉ: ನಾನು ಬೇರೆ ಕಡೆ ಕೆಲಸ ಮಾಡುತ್ತೇನೆ.

ನನ್ನದು ಮತ್ತು ನನ್ನ ಸಹೋದರ ಮದ್ಯ ಒಂದು ಅಂಗಡಿ ಇದೆ. ನಮ್ಮದು ಯಾವುದೇ ಫ್ಯಾಕ್ಟರಿ ಇಲ್ಲ. ನಿಪಿ-4 ರಲ್ಲಿ ನನ್ನ ಹೆಸರು ಇದೆ ಎಂದರೆ ಸರಿ. ನಿಪಿ-5 ನಮ್ಮ ಕುಟುಂಬದ ಆಸ್ತಿ ಎಂದರೆ ಸರಿ. ನಿಪಿ-5 ರಲ್ಲಿ ನನ್ನ ಅಣ್ಣನ ಹೆಸರು ಇರುತ್ತದೆ. ನಿಪಿ-6 ನಮ್ಮ ಮನೆತನಕ್ಕೆ ಸಂಬಂಧಿಸಿದ್ದು ಅಲ್ಲ. ನಿಪಿ-6 ರಲ್ಲಿ ನನ್ನ ಸಹೋದರನ ಹೆಸರು ಇದೆ ಎಂದರೆ ಸರಿ. ನನ್ನ ತಂದೆ ಕಾಲದಿಂದಲೂ ನನ್ನ ಅಣ್ಣ ಅಲ್ಲಾಭಕ್ಷನೇ ಮನೆ ವ್ಯವಹಾರ ನೋಡಿಕೊಳ್ಳುತ್ತಾನೆ ಎಂದರೆ ಸರಿ. 2 ನೇ ಎದುರುಗಾರರು ನಮ್ಮ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. ಅರ್ಜಿದಾರಳು ಬಡ ಕುಟುಂಬದವಳು ಎಂದರೆ ಸಾಕ್ಷಿ ಕೋಟಿಗಟ್ಟಲೆ ಆಸ್ತಿ ಇದೆ ಎಂದು ನುಡಿಯುತ್ತಾರೆ. ಅವರ ಆಸ್ತಿ ಇದೆ ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮದುವೆಯಾದ 6 ತಿಂಗಳಿಗೆ ಅರ್ಜಿದಾರಳ ತಂದೆ ತೀರಿಕೊಂಡರು ಎಂದರೆ ಸರಿ. ಅರ್ಜಿದಾರಳಿಗೆ ಒಬ್ಬ ತಮ್ಮ ಮಾತ್ರ ಎಂದರೆ ಸಾಕ್ಷಿ ಇಬ್ಬರು ತಮ್ಮಂದಿರು ಅಂತಾ ನುಡಿಯುತ್ತಾರೆ. ನಿಶ್ಚಿತಾರ್ಥ ಆಗಿ 6 ತಿಂಗಳಿಗೆ ಮದುವೆಯಾಗಿರುತ್ತದೆ. ನಮಂ ಮದುವೆ ಹಾನಗಲ್ ನಲ್ಲಿ ಆಗಿರುತ್ತದೆ. ನಿಶ್ಚಿತಾರ್ಥ ಸಮಯದಲ್ಲಿ ಅರ್ಧ ತೊಲೆ ಉಂಗುರ ಮತ್ತು ಬಟ್ಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಅರ್ಧ ತೊಲೆ ಉಂಗುರ ಮತ್ತು ಬಟ್ಟೆ ಪಡೆದಿದ್ದೇನೆ ಅಂತಾ ಬರೆಸಿದ್ದೇನೆ ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಏನೂ ತೆಗೆದುಕೊಂಡಿರುವುದಿಲ್ಲ. ಮದುವೆ ಕಾಲದಲ್ಲಿ ಅರ್ಜಿದಾರಳಿಗೆ ನಾವು 8 ತೊಲೆ ಚಿನ್ನ ಕೊಟ್ಟಿರುತ್ತೇವೆ. 8 ತೊಲೆ ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. 8 ತೊಲೆ ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಮದುವೆಯಾದ ಮೇಲೆ ಅರ್ಜಿದಾರಳು ನನ್ನೊಂದಿಗೆ 8 ವರ್ಷ ಜೀವನ ಮಾಡಿರುತ್ತಾಳೆ. 8 ವರ್ಷದಲ್ಲಿ ಅರ್ಜಿದಾರಳು ಒಮ್ಮೆ ಗರ್ಭಿಣಿಯಾಗಿದ್ದು ಅದು ಗರ್ಭಪಾತವಾಗಿತ್ತು ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ

ದಾಖಲೆಗಳು ನನ್ನ ಬಳಿ ಇವೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಅರ್ಜಿದಾರಳ ಆಧಾರಕಾರ್ಡ, ರೇಷನ್ ಕಾರ್ಡ, ಪಾನ್ ಕಾರ್ಡ ಮತ್ತು ಪಾಸಪೋರ್ಟ ನನ್ನ ಬಳಿ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್